ದಿನಾಂಕಃ 16-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಅರ್ ಜೆ ವಕೀಲರಿಂದ</u>**

ನಿಪಿ-1 ರಂತೆ ವಿಭಾಗವಾಗುವ ಮುನ್ನ ನನ್ನ ತಂದೆ ಮತ್ತು ವಾದಿಗಳು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ಜನ್ಮ ದಿನಾಂಕ 14-04-1998 ಅಗಿರುತ್ತದೆ. ದಾವಾಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಲಿಖಿತ ತಕರಾರಿನಲ್ಲಿ ನಮೂದಿಸಿರುತ್ತೇವೆ. ಸದರಿ ದಾವಾಸ್ತಿಯನ್ನು ನಮ್ಮ ತಂದೆ ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಾರಾಸ್ತಿಯನ್ನು ನನ್ನ ತಂದೆ ನಿಡಿ-1 ರಂತೆ 1994-ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ವಾದಿಗಳು ಮತ್ತು ನಮ್ಮ ತಂದೆ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ಪುಟ ಸಂಖ್ಯೆ 2 ರ ಪ್ಯಾರ ನಂ 3 ರಲ್ಲಿ " ತಮ್ಮ ಒಟ್ಟು ಕುಟುಂಬದ ಅಸ್ತಿಯಾದ ಸರ್ವೆ ನಂ 52/ಪಿ2 ರಲ್ಲಿನ 38.8 ಗುಂಟೆ ಜಮೀನು ಅಸಲು ದಾವಾ ನಂ 2962/2008 ರಲ್ಲಿ ನಿಪಿ-1 ರಂತೆ ಆದ ರಾಜೀ ಡಿಕ್ರಿಯಲ್ಲಿ ಸೇರಿಸಲ್ಪಟ್ಟಿಲ್ಲ ಎಂದು ನಮೂದಿಸಿರುತ್ತೇನೆ ಎಂದರೆ ಸರಿ." ನಿಪಿ-1 ರಲ್ಲಿನ ಕ್ರಮ ಸಂಖ್ಯೆ 1 ರಲ್ಲಿ ಮತ್ತು ಸದರಿ ಆಸ್ತಿಯಲ್ಲಿ ತಲಾ 19ವರೆ ಗುಂಟೆಯಂತೆ ವಾದಿಗಳಿಗೂ ಮತ್ತು ನಮ್ಮ ತಂದೆಯ ಹಿಸ್ಸೆಗೂ ಬಂದಿದೆ ಎಂದರೆ ಸರಿ. ಹಾಗಾಗಿ ನಮ್ಮ ಮತ್ತು ವಾದಿಗಳ ನಡುವೆ ವಿಭಾಗವಾಗತಕ್ಕಂತಹ ಯಾವುದೇ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ.

ನಿಪಿ-1 ರಂತೆ ಕ್ರಮ ಸಂಖ್ಯೆ 3 ರಲ್ಲಿನ ಒಂದು ಅಂಕಣದ ಮನೆ ನಮ್ಮ ಹಿಸ್ಸೆಗೆ ಬಂದಿದ್ದು ವಾದಿಗಳಿಗೆ 2 ಅಂಕಣದ ಮನೆ ಹಂಚಿಕೆಯಾಗಿದೆ ಎಂದರೆ ಸರಿ. ಹಾಗಾಗಿ ನಮ್ಮ ಒಟ್ಟು ಕುಟುಂಬದಲ್ಲಿ ವಿಭಾಗಮಾಡಿಕೊಳ್ಳತಕ್ಕಂತಹ ಯಾವುದೇ ಆಸ್ತಿಗಳು ಉಳಿದಿಲ್ಲ ಎಂದರೆ ಸರಿ. ಹಾಗಾಗಿ ದಾವಾಸ್ತಿ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ತಕರಾರನ್ನು ಸಲ್ಲಿಸಿ ನನಗೆ ಸದರಿ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೆ ಇದ್ದರು ಸಹ ಸದರಿ ದಾವಾಸ್ತಿ ಈಗಾಗಲೇ ನಿಪಿ-1ರಂತೆ ರಾಜಿ ಡಿಕ್ರಿಯಾಗಿದ್ದರು ಸಹ ನಾನು ಸುಳ್ಳು ಪ್ರ.ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ಈಗಾಗಲೇ ನಿಪಿ-1 ರಂತೆ ಹಂಚಿಕೆಯಾದ ವಿಚಾರ ನನಗೆ ಗೊತ್ತಿದ್ದರು ಸಹ ಸದರಿ ದಾವಾಸ್ತಿಯ ಖಾತೆ ನಮ್ಮ ತಂದೆಯ ಹೆಸರಿನಲ್ಲಿ ಮುಂದುವರೆಯುತ್ತಿರುವುದರ ದುರುಪಯೋಗ ಪಡೆದು ನಾನು ನನ್ನ ತಾಯಿಯಾದ 1 ನೇ ಪ್ರತಿವಾದಿಯಿಂದ ನಿಪಿ-14 ರಂತೆ ದಿಃ 30-10-2021ರಂದು ನೊಂದಾಯಿತ ದಾನಪತ್ರವನ್ನು ಸೃಷ್ಟಿ

ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸದರಿ ದಾವಾಸ್ತಿಯಲ್ಲಿ ನಿಪಿ-1ರಂತೆ ಬಂದ ಅರ್ಧ ಹಿಸ್ಸೆಯಲ್ಲಿ ಮಾತ್ರ ನನಗೆ ಹಕ್ಕು ಇದ್ದು , ಪೂರ್ಣ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿ. ಹಾಗಾಗಿ ನನಗೆ ಸದರಿ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ನಿಪಿ-14 ರಂತೆ ದಾನಪತ್ರವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.